# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 374
ಸದಸ್ಯರ ಹೆಸರು : ಶ್ರೀ ಜಿ. ರಘು ಆಚಾರ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 06-03-2020

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗುವ ವೋಲ್ವೋ ಬಸ್‌ಗಳು ರಾತ್ರಿ ವೇಳೆ ಚಿತ್ರದುರ್ಗ ಪಟ್ಟಣಕ್ಕೆ ಹೋಗದೆ ಪ್ರಯಾಣಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಕ.ರಾ.ರ.ಸಾ.ನಿಗಮದಿಂದ ಬೆಂಗಳೂರು-ದಾವಣಗೆರೆ ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಐರಾವತ, ಐರಾವತ ಕ್ಲಬ್ ಕ್ಲಾಸ್ ಸಾರಿಗೆಗಳನ್ನು ಚಿತ್ರದುರ್ಗ ಬಸ್ ನಿಲ್ದಾಣದ ಮುಖೇನ ಕಾರ್ಯಾಚರಿಸಲಾಗುತ್ತಿದೆ.</td></tr>
<tr><td>ಆ</td><td>ವೋಲ್ವೋ ಬಸ್‌ಗಳು ಚಿತ್ರದುರ್ಗ ನಗರ ಬಸ್ ನಿಲ್ದಾಣಕ್ಕೆ ಹೋಗಿ ಬೇರೆ ಊರುಗಳಿಗೆ ತೆರಳಲು ಕೈಗೊಂಡಿರುವ ಕ್ರಮಗಳೇನು: ಇಲ್ಲದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?(ವಿವರ ನೀಡುವುದು)</td><td>ಬೆಂಗಳೂರು-ದಾವಣಗೆರೆ ಮಾರ್ಗದಲ್ಲಿ ಪ್ರತಿನಿತ್ಯ 5 ಐರಾವತ ಹಾಗೂ 14 ಐರಾವತ ಕ್ಲಬ್ ಕ್ಲಾಸ್ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ರಾತ್ರಿ ಸಾರಿಗೆಗಳನ್ನು ಒಳಗೊಂಡಂತೆ ಚಿತ್ರದುರ್ಗ ಬಸ್ ನಿಲ್ದಾಣದ ಮುಖೇನ ಕಾರ್ಯಾಚರಿಸಲಾಗುತ್ತಿದೆ.<br><br>ಸದರಿ ಸಾರಿಗೆಗಳ ಬೆಂಗಳೂರು ನಿರ್ಗಮನ ಸಮಯವು ಕೆಳಕಂಡಂತಿದೆ:<br><br><table><tr><th>ಕ್ರ.ಸ</th><th>ಮಾರ್ಗ</th><th>ಸಾರಿಗೆ ವರ್ಗ</th><th>ಬೆಂಗಳೂರು ನಿರ್ಗಮನ ಸಮಯ</th></tr><tr><td>1</td><td>ಬೆಂಗಳೂರು-ದಾವಣಗೆರೆ</td><td>ಐರಾವತ</td><td>15:14, 16:50, 17:20, 23:21, 23:55</td></tr><tr><td>2</td><td>ಬೆಂಗಳೂರು-ದಾವಣಗೆರೆ</td><td>ಐರಾವತ ಕ್ಲಬ್ ಕ್ಲಾಸ್</td><td>05:00, 06:00, 06:55, 07:30, 08:00, 09:01, 12:30, 14:02, 16:00, 17:45, 18:30, 19:15, 23:00, 23:47</td></tr></table><br>ಉಳಿದಂತೆ, ದೂರದ ಮಾರ್ಗಗಳಲ್ಲಿ (ಬೆಂಗಳೂರು-ಮುಂಬೈ, ಬೆಂಗಳೂರು-ಶಿರಡಿ, ಬೆಂಗಳೂರು-ಪೂನಾ) ಕಾರ್ಯಾಚರಣೆ ಮಾಡುತ್ತಿರುವ ಐರಾವತ ಕ್ಲಬ್ ಕ್ಲಾಸ್ ಸಾರಿಗೆಗಳನ್ನು ಮಾರ್ಗ ಮಧ್ಯೆ ಇರುವ ಎಲ್ಲಾ ಬಸ್ ನಿಲ್ದಾಣಗಳ ಮುಖೇನ ಕಾರ್ಯಾಚರಿಸಿದಲ್ಲಿ ನೇರ ಪ್ರಯಾಣಿಕರಿಗೆ ಪ್ರಯಾಣದ ಸಮಯ ಹೆಚ್ಚಾಗಿ ಅವರಿಗೆ ಅನಾನುಕೂಲವಾಗುವುದರಿಂದ, ದೂರದ ಮಾರ್ಗಗಳ ಸಾರಿಗೆಗಳನ್ನು ನಿಗದಿತ ಬಸ್ ನಿಲ್ದಾಣಗಳ ಮುಖೇನ ಕಾರ್ಯಾಚರಿಸಲಾಗುತ್ತಿದೆ.</td></tr>
</table>

ಸಂಖ್ಯೆ: ಟಿಡಿ 38 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು